**ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ**
**ನ್ಯಾಯಾಲಯ, ಕನಕಪುರ**

**<u>ಸಿ.ಸಿ ನಂ. 54/2013</u>**

ದಿನಾಂಕಃ**. 23.02.2026.** ರಂದು ಸಾಕ್ಷಿಗೆ ಮದ್ಯಾಹ್ನ **12.45** ಗಂಟೆಗೆ ಪ್ರಮಾಣ ವಚನ ಭೋದಿಸಲಾಯಿತು.

| ಚಾಸಾ-**1** | ಪ್ರಾಸಾ-**2** |
|---|---|
| ಹೆಸರು | - ಬಸವರಾಜು |
| ತಂದೆ ಹೆಸರು | - ಭೀಮೇಗೌಡ |
| ವಯಸ್ಸು | - **45** |
| ಉದ್ಯೋಗ | - ವ್ಯವಸಾಯ |
| ವಿಳಾಸ | - ಕಂಚನಹಳ್ಳಿ ಗ್ರಾಮ |

**<u>ಮುಖ್ಯವಿಚಾರಣೆ : ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರಿಂದಃ-</u>**

ನ್ಯಾಯಾಲಯದ ಮುಂದಿರುವ ಆರೋಪಿತರು ನನಗೆ ಪರಿಚಯ. ಚಾಸಾ-**2** ರಿಂದ **5** ರವರು ನನ್ನ ಸ್ನೇಹಿತರು.

ಸಾಕ್ಷಿ ಒಂದು ದೂರನ್ನು ನೋಡಿ ಅದರಲ್ಲಿರುವ ಒಂದು ಸಹಿಯನ್ನು ನೋಡಿ ತನ್ನ ಸಹಿಯನ್ನು ಎಂದು ಗುರುತಿಸಿದ್ದು, ಸದರಿ **ದೂರನ್ನು** ನಿಪಿ-**2** ಎಂದು, ಸಾಕ್ಷಿ ಸಹಿಯನ್ನು ನಿಪಿ-**2(**ಎ**)** ಎಂದು ಗುರುತಿಸಲಾಯಿತು. ನಿ.ಪಿ.**2(**ಎ**)** ಸಹಿಯನ್ನು ಯಾವಾಗ ಯಾವ ಕಾರಣಕ್ಕೆ ಮಾಡಿದ್ದೇನೆ ಗೊತ್ತಿಲ್ಲ. ನಿ.ಪಿ.**2** ರಲ್ಲಿ ಏನು ಬರೆದಿದೆ ನನಗೆ ಗೊತ್ತಿಲ್ಲ.

ಸಾಕ್ಷಿ ಪಂಚನಾಮೆಯನ್ನು ನೋಡಿ ಅದರಲ್ಲಿರುವ ಒಂದು ಸಹಿಯನ್ನು ನೋಡಿ ತನ್ನ ಸಹಿ ಮತ್ತು ಪಂಚನಾಮೆ ಎಂದು ಗುರುತಿಸಿದ್ದು, ಸದರಿ **ಪಂಚನಾಮೆಯನ್ನು** ನಿಪಿ-**3** ಎಂದು, ಸಾಕ್ಷಿ ಸಹಿಯನ್ನು ನಿಪಿ-**3(**ಎ**)** ಎಂದು ಗುರುತಿಸಲಾಯಿತು.

ಪೊಲೀಸರು ನನ್ನ ಸಮಕ್ಷಮ ಪಂಚನಾಮೆ ಮಾಡಿರುವುದಿಲ್ಲ ಮತ್ತು ಏನನ್ನು ವಶಪಡಿಸಿಕೊಂಡಿರುವುದಿಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ರವರು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-</u>

ದಿ. **26.05.2012** ರಂದು ಬೆಳಗ್ಗೆ **8** ಗಂಟೆ ಸಮಯದಲ್ಲಿ ನಾನು ಮತ್ತು ನನ್ನ ಸ್ನೇಹಿತ **2** ರವರು ನಮ್ಮ ಗ್ರಾಮದ ಬಸವೇಶ್ವರ ದೇವಸ್ಥಾನದ ಬಳಿ ಶಾಲಾ ಕಟ್ಟಡ ಹಾಗೂ ವಿವಿದೊದ್ದೇಶ ಕಾಮಗಾರಿಗಳ ಬಗ್ಗೆ ನಿವೇಶನವನ್ನು ವೀಕ್ಷಿಸುವ ಉದ್ದೇಶದಿಂದ ನಿವೇಶನದಲ್ಲಿ ನಿಂತಿದ್ದು ಆರೋಪಿತರು ಹಳೇ ದ್ವೇಷದ ವಿಚಾರವಾಗಿ ಅಕ್ರಮ ಗುಂಪು ಕಟ್ಟಿಕೊಂಡು ಬಂದು **1**ನೇ ಆರೋಪಿ ತನ್ನ ಕೈಯಲ್ಲಿದ್ದ ದೊಣ್ಣೆಯಿಂದ ಚಾ.ಸಾ. **2** ರವರ ಎಡಗೈ ಕಿರುಬೆರುಳಿನ ಮೇಲೆ ಹೊಡೆದು ತೀವ್ರ ಸ್ವರೂಪದ ರಕ್ತಗಾಯಪಡಿಸಿ ಮತ್ತು ಬಲಮೊಣಕೈ ಮೇಲೆ ಹೊಡೆದು ರಕ್ತಗಾಯಪಡಿಸಿದ್ದು, ಆಗ **2**ನೇ ಆರೋಪಿ ರಿಪೀಸ್ ಪಟ್ಟಿಯಿಂದ ಬೆನ್ನಿನ ಮೇಲೆ ಎಡಭುಜದ ಮೇಲೆ, ಎಡತೋಳಿನ ಮೇಲೆ ಹೊಡೆದು ರಕ್ತಗಾಯಪಡಿಸಿದಾಗ, **3**ನೇ ಆರೋಪಿ ತನ್ನ ಕೈಯಲ್ಲಿದ್ದ ಕಲ್ಲಿನಿಂದ ಚಾ.ಸಾ. **2** ರವರ ಎಡಮೊಣಕಾಲಿನ ಮೇಲೆ, ಎಡಗಾಲಿನ ಮಂಡಿಯ ಮೇಲೆ, ಮತ್ತು ಬಲಗೈ ಮೇಲೆ ಹೊಡೆದು ರಕ್ತಗಾಯಪಡಿಸಿ ನೋವುಂಟು ಮಾಡಿದ್ದು, **5**ನೇ ಆರೋಪಿ ಕೈಯಿಂದ ಚಾ.ಸಾ. **2** ರವರ ಮುಖದ ಮೇಲೆ, ಬೆನ್ನಿನ ಮೇಲೆ ಹೊಡೆದು ಕೆಳಗೆ ಕೆಡವಿ ಕಾಲಿನಿಂದ ಹೊಟ್ಟೆಯ ಮೇಲೆ ತುಳಿದು ನೋವುಂಟು ಮಾಡಿದಾಗ ನಾನು ಮತ್ತು ಚಾ.ಸಾ. **3** ರವರು ಜಗಳ ಬಿಡಿಸಿ ಸಮಾಧಾನ ಪಡಿಸಿ ದೂರನ್ನು ಕೊಡುವಾಗ **5**ನೇ ಆರೋಪಿ ತನ್ನ ಕೈಯಿಂದ, ಕಾಲಿನಿಂದ ಚಾ.ಸಾ. **2** ರವರಿಗೆ ಒಂದು ನೋವುಂಟು ಮಾಡಿದರು ಎಂದರೆ ಸರಿಯಲ್ಲ. ಈ ಬಗ್ಗೆ ನಿ.ಪಿ. **1** ರಂತೆ ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ದಿ.**26.05.2012** ರಂದು ನನ್ನ ಹಾಗೂ ಚಾಸಾ-**4** ಮತ್ತು **5** ರವರ ಸಮಕ್ಷಮ ಪೊಲೀಸರು ನಿಪಿ- **2** ರ ಪ್ರಕಾರ ಮದ್ಯಾಹ್ನ **2.30** ಗಂಟೆಯಿಂದ **3** ಗಂಟೆವರೆಗೆ ಪಂಚನಾಮೆ ಮಾಡಿ ಒಂದು ದೊಣ್ಣೆ, ಒಂದು ರಿಪೀಸ್ ಪಟ್ಟಿ ಮತ್ತು ಒಂದು ಕಲ್ಲನ್ನು ವಶಪಡಿಸಿಕೊಂಡರು ಎಂದರೆ ಸರಿಯಲ್ಲ.

ಸಾಕ್ಷಿಗೆ ದಿಃ **26.05.2012** ರಂದು ಅವನು ಪೊಲೀಸರಿಗೆ ನೀಡಿದ ಎಂಬ ಮರು ಹೇಳಿಕೆಯ ಭಾಗವಾದ "ದಿ.**26.05.2012** …….ಕ್ರಮ ಜರುಗಿಸಲು ಕೋರುತ್ತೇನೆ ", ಓದಿ ಹೇಳಿದಾಗ ಅಲ್ಲಗಳೆದಿದ್ದರಿಂದ ಸದರಿ ಹೇಳಿಕೆ ಭಾಗವನ್ನು **ನಿಪಿ-4** ಎಂದು ಗುರುತಿಸಲಾಯಿತು.

ಆರೋಪಿಯೊಂದಿಗೆ ರಾಜಿ ಮಾಡಿಕೊಂಡಿರುವ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ. ವಕೀಲರಿಂದಃ</u>**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಮದ್ಯಾಹ್ನ **12.55** ಗಂಟೆಯವರೆಗೆ ಪಡೆದುಕೊಂಡಿರುತ್ತೇನೆ ಎಂದು ಧೃಢೀಕರಿಸುತ್ತೇನೆ)

ಓದಿ ಹೇಳಿ ಕೇಳಿ ಸರಿ ಇದೆ,

**ಮೂರನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ., ಕನಕಪುರ.**